Karnataka Veterinary, Animal & Fisheries Sciences University, Bidar

ಕರ್ನಾಟಕ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಡೀನ್‌ರವರ ಕಾರ್ಯಾಲಯ
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

Office of the Dean
Veterinary College, BIDAR

ಸಂಖ್ಯೆ ಡೀನ್/ಪವೈಮ(ಬೀ)/ಬೊ.ಗು.ನೇ/2023-24 ದಿನಾಂಕ 08-11-2023

Veterinary College, BIDAR
Sl. No: 939 Date: 08/11/23

# ಪ್ರಕಟಣೆ

**ವಿಷಯ:** ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕುರಿತು

**ಉಲ್ಲೇಖ:** 1) File No. RGR-EST0GEN/14/2023-ESTD-O/oDR/7789/3677 Dtd: 06-11-2023
2) No.R/Rectt/104th BOM/Dir.RecTeacher.ScoreCard/2022/2697 Dtd 8-9-2022

<><><>

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಕುಲಸಚಿವರ ಆದೇಶದಂತೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಎದುರಾಗಿ ಗುತ್ತಿಗೆ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಲು ಅರ್ಹ ಅಭ್ಯಾರ್ಥಿಗಳಗೆ ಅರ್ಜಿಯನ್ನು ಅಹ್ವಾನಿಸಲಾಗಿದೆ. ನೇಮಕಾತಿ ಬಯಸುವ ಅಭ್ಯರ್ಥಿಗಳುನಿಗದಿತ ನಮೂನೆಯಲ್ಲಿ ಭರ್ತಿಮಾಡಿ **ದಿನಾಂಕ 16-11-2023 ರಂದು ಬೆಳಗ್ಗೆ 10.00 ಗಂಟೆಗೆ** ನಡೆಯಲ್ಲಿರುವ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಅಂಗರಚನಾಶಾಸ್ತ್ರ<br>Veterinary Anatomy | 01 |
| 2 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಪಶುಸಂಗೋಪನಾ ವಿಸ್ತರಣಾ ಶಿಕ್ಷಣ ವಿಭಾಗ<br>Veterinary Animal Husbandry Ext. Education | 01 |
| 3 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ರೋಗಶಾಸ್ತ್ರ<br>Veterinary Pathology | 01 |
| 4 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಸಾರ್ವಜನಿಕ ಹಾಗೂ ಸಮೂದಾಯ ರೋಗ ಅಧ್ಯಯನಾಶಾಸ್ತ್ರ<br>Veterinary Public Health & Epidiology | 01 |
| 5 | ಸಹಾಯಕ ಪ್ರಾಧ್ಯಾಪಕರು<br>Assistant Professor | ಜಾನುವಾರು ಸಾಕಾಣಿಕ ಸಂಕೀರ್ಣ Livestock Farm Complex<br>ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿಶಾಸ್ತ್ರ Vety Gyneacology Obstetrics | 01 |
| 6 | ಸಹಾಯಕ ಪ್ರಾಧ್ಯಾಪಕರು<br>Assistant Professor | ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ Veterinary Clinical Complex<br>Veterinary Surgery Radiology-01<br>Veterinary Gyneacology Obstetrics-01 | 02 |
| 7 | ಸಹಾಯಕ ಪ್ರಾಧ್ಯಾಪಕರು<br>Assistant Professor | ದೈಹಿಕ ಶಿಕ್ಷಣ ವಿಭಾಗ<br>Physical Education | 01 |

**ವಿದ್ಯಾರ್ಹತೆ:**

- ಸಂಬಂಧಪಟ್ಟ ವಿಷಯದಲ್ಲಿ ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಹೊಂದಿರುವ ಮಹಾವಿದ್ಯಾಲಯಗಳಿಂದ ಪಶುವೈದ್ಯಕೀಯ ಅಥವಾ ಭಾರತೀಯ ಕೃಷಿ ಅನುಸಾಂಧ ಪರಿಷತ್ತಿನ ಅಡಿಯಲ್ಲಿ ಬರುವ Deemed Institutions ಗಳಿಂದ BVSc&AH ಪದವಿ ಪಡೆದಿರಬೇಕು
- ಸಂಬಂಧಪಟ್ಟ ವಿಷಯದಲ್ಲಿ ಎಂವ್ಹಿಎಸ್‌ಸಿ (MVSc) ಅಥವಾ ಪಿಎಚ್‌ಡಿ (Ph.D) ಪಡೆದಿರಬೇಕು
- ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಉತ್ತೀರ್ಣರಾದವರಿಗೆ ಮೊದಲ ಆದ್ಯತೆ ನೀಡಲಾಗುವುದು.

**ಷರತ್ತು ಮತ್ತು ನಿಬಂಧನೆಗಳು:**

- ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರುವ ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. 56,700/- ಸಂಭಾವನೆ ನೀಡಲಾಗುವುದು. ಪಿಎಚ್‌ಡಿ ಪದವಿ/ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪ್ರಮಾಣ ಪತ್ರ ಹೊಂದಿರದ ಅಭ್ಯರ್ಥಿಗಳಿಗೆ ಮಾಸಿಕ ರೂ. 50,000/- ವೇತನ ಪಾವತಿಸಲಾಗುವುದು

- ಉಲ್ಲೇಖ (2) ರ ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಬಂದು ಸಂದರ್ಶನಕ್ಕೆ ಹಾಜರಾಗಬೇಕು

- ಅಭ್ಯರ್ಥಿಗಳು ಯಾವುದೇ ಸಂಧರ್ಭದಲ್ಲಿ ಅರ್ಜಿಗಳನ್ನು ಮುಂಚಿತವಾಗಿ ಅಥವಾ ಮಿಂಚಂಚೆ ಮೂಲಕ ಕಳುಹಿಸುವಂತಿಲ್ಲ

- ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಖಾಯಮಾತಿ, ಹಿರಿತನ, ಸಕ್ರಮಾತಿ, ಪಿ.ಎಫ್/ಇ.ಎಸ್.ಐ ಮತ್ತು ಇತರೆ ಯಾವುದೇ ತರಹದ ಸೌಲಭ್ಯ ಅಥವಾ ಹಕ್ಕಿಗೆ ಒಳಪಟ್ಟಿರುವುದಿಲ್ಲ.

- ಸದರಿ ಅಧಿಸೂಚನೆಯು ತಾತ್ಕಾಲಿಕ ನೇಮಕಾತಿಯಾಗಿದ್ದು, ಯಾವುದೇ ಸಮಯದಲ್ಲಿ ಯಾವುದೇ ಮಾಹಿತಿ ನೀಡದೆ ಕೆಲಸದಿಂದ ಬಿಡುಗಡೆ ಮಾಡಲಾಗುವುದು ಅಥವಾ ಅವಧಿಯ ಮುಂಚಿತವಾಗಿ ಆದೇಶ ರದ್ದು ಪಡಿಸಲಾಗುವುದು

- ಪ್ರಸ್ತುತ ಸಹಾಯಕ ಪ್ರಾಧ್ಯಾಪಕ ಹುದ್ದೆಗಳು 179 ದಿನಗಳ ಅವಧಿಗೆ ಮಾತ್ರ ಅಥವಾ ಖಾಯಂ ಭರ್ತಿ ಆಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

- ಕಲ್ಯಾಣ ಕರ್ನಾಟಕ ಅಥವಾ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು

ಡೀನ್(ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಬೀದರ

ಡೀನ್ (ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಅ.ಪೆ.ಸಂಖ್ಯೆ 6, ಬೀದರ

**ಪ್ರ.ಆ:**

1. ಮಾನ್ಯ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಶಿವಮೊಗ್ಗ/ಹಾಸನ/ಗದಗ ಇವರ ಮಾಹಿತಿಗಾಗಿ ಹಾಗೂ ತಮ್ಮ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ
2. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವರ ಮಾಹಿತಿಗಾಗಿ ಸದರಿ ಅಧಿಸೂಚನೆಯನ್ನು ವ್ಯಾಪಕವಾಗಿ ಪ್ರಚುರ ಪಡಿಸಲು ಕೋರಿದೆ
3. ಹಿರಿಯ ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಛೇರಿ, ಕಪಪಂಮೀವಿವಿ, ಬೀದರ ಮಾಹಿತಿಗಾಗಿ ಮತ್ತು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಿದೆ.